# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ವಾರ್ಡ್ 93, ವಸಂತನಗರ

### ವಾರ್ಡ್ ಸಮಿತಿ ಸಭೆಯ ನಡವಳಿಗಳು

ದಿನಾಂಕ: 19-06-2021 ರಂದು ಶನಿವಾರ ಬೆಳಿಗ್ಗೆ 11.00 ಗಂಟೆಗೆ, ವಾರ್ಡ್ ಕಛೇರಿಯಲ್ಲಿ ಶ್ರೀಮತಿ ಮಂಜುಳಮ್ಮ, ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ತಹಶಿಲ್ದಾರ್(ಚುನಾವಣೆ) ಬಿ.ಬಿ.ಎಂ.ಪಿ ರವರ ಅಧ್ಯಕ್ಷತೆಯಲ್ಲಿ ಸಮಿತಿ ಸಭೆಯನ್ನು ನಡೆಸಲಾದ ವಾರ್ಡ್ ಸಮಿತಿಯ ಸಭೆಯ ನಡವಳಿ:-

ಈ ಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರುಗಳ ವಿವರಗಳು

| | | |
|---|---|---|
| **ಸದಸ್ಯರುಗಳು** | | |
| 1 | ಶ್ರೀಮತಿ ಚಿತ್ರ ವೆಂಕಟೇಶ್ | ಸಮಿತಿ ಸದಸ್ಯರು |
| 2 | ಶ್ರೀ. ಅರವಿಂದ್ ರಾಮದಾಸ್ | ಸಮಿತಿ ಸದಸ್ಯರು |
| 3 | ಶ್ರೀ. ರಾಜ್ ದುಗ್ಗಾರ್ | ಸಮಿತಿ ಸದಸ್ಯರು |
| 4 | ಶ್ರೀ. ಅಜಯ್ ಟಂಡನ್ | ಸಮಿತಿ ಸದಸ್ಯರು |
| **ಅಧಿಕಾರಿಗಳು** | | |
| 1 | ಶ್ರೀ. ಕೀರ್ತಿ | ಮಾರ್ಷಲ್ |
| 2 | ಡಾ॥ ಸಯ್ಯದ್ | ಪಿ.ಹೆಚ್.ಎಸ್ (ಪ್ರಾಥಮಿಕ ಆರೋಗ್ಯ ಕೇಂದ್ರ) |
| 3 | ಶ್ರೀ. ಸೈಫುಲ್ಲಾ | ಸ್ಟ್ರೀಟ್ ಲೈಟ್ |
| 4 | ಶ್ರೀಮತಿ ಪುಷ್ಪ | ಕಂದಾಯ ನಿರೀಕ್ಷಕರು |
| 5 | ರೇಣುಕಾಂಬ | ಎಸ್.ಹೆಚ್.ಐ |
| 6 | ಶ್ರೀ ನಾಗೇಂದ್ರ | ಜೆ.ಹೆಚ್.ಐ |
| 7 | ಶ್ರೀ ಮಹಮದ್ ಜಾವೇದ್ | ಸಹಾಯಕ ಕಾರ್ಯಪಾಲಕ ಅಭಿಯಂತರರು |
| 8 | ಶ್ರೀ ಮೂರ್ತಿ | ಕಂದಾಯ ವಸೂಲಿಗಾರರು |
| **ಗೈರುಹಾಜರಾದವರು** | | |
| 1 | ಶ್ರೀ ನವೀನ್ ಕುಮಾರ್ | MOH |
| 2 | ಶ್ರೀ ಶ್ರೀನಿವಾಸ್ | ಸಹಾಯಕ ಅಭಿಯಂತರರು ಮೇಜರ್ ರೋಡ್ |
| 3 | ಲಿಂಗಯ್ಯ ಕೆ.ಬಿ ಬಸವರಾಜ್ | ಸಹಾಯಕ ಕಂದಾಯ ಅಧಿಕಾರಿಗಳು |
| 4 | ಶ್ರೀ. ತಿಮ್ಮೇಗೌಡ | ಜೂನಿಯರ್ ಇಂಜಿನಿಯರ್ ಬೆಸ್ಕಾಂ |
| 5 | ಶ್ರೀಮತಿ ಮಂಜುಳ | ಅರಣ್ಯ ಇಲಾಖೆ |

ಸಭೆಯಲ್ಲಿ ನೋಡಲ್ ಅಧಿಕಾರಿಗಳಾದ ಶ್ರೀಮತಿ ಆರ್ ಮಂಜುಳಮ್ಮ ತಹಶೀಲ್ದಾರ್ (ಚುನಾವಣೆ) ರವರು ಸಭೆಯಲ್ಲಿ ಎಲ್ಲಾರನ್ನು ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ವಿವರಿಸಿದರು ಹಾಗೂ ಪ್ರಸ್ತುತ ಸಭೆಯಲ್ಲಿ ಸದಸ್ಯರಿಗೆ ವಿಷಯಗಳನ್ನು ಚರ್ಚಿಸಲು ತಿಳಿಸಿದರು.

ಸಮಿತಿ ಸದಸ್ಯರಾದ ಶ್ರೀಮತಿ ಚಿತ್ರ ವೆಂಕಟೇಶ್ ರವರು ವ್ಯಾಕ್ಸಿನೇಷನ್ ಬಗ್ಗೆ ಮಾಹಿತಿ ಬಯಸಿದರು ಹಾಗೂ ಪೌರಕಾರ್ಮಿಕರಿಗೆ ವ್ಯಾಕ್ಸಿನ್ ನೀಡಲು ತಿಳಿಸಿದರು. ಈ ಬಗ್ಗೆ ಡಾ॥ ಸಯ್ಯದ್‌ಪಿ.ಹೆಚ್.ಎಸ್ (ಪ್ರಾಥಮಿಕ ಆರೋಗ್ಯ ಕೇಂದ್ರ) ರವರು ಮಾತಾನಾಡುತ್ತಾ, ಸರ್ಕಾರದಿಂದ ವ್ಯಾಕ್ಸಿನೇಷನ್ ಪ್ರಮಾಣ ಸರಬರಾಜು ಆಗುವ ಪರಿಮಿತಿಗೆ ಒಳಪಟ್ಟು ಎಲ್ಲಾರಿಗೂ ವ್ಯಾಕ್ಸಿನೇಷನ್ ನೀಡುವುದಾಗಿ ಸಭೆಗೆ ತಿಳಿಸಿದರು.

ಶ್ರೀಮತಿ ಚಿತ್ರ ವೆಂಕಟೇಶ್ ರವರು 6 & 7ನೇ ಕ್ರಾಸ್‌ನಲ್ಲಿ ಫುಟ್‌ಪಾತ್ ಕಿತ್ತುಹಾಕಿರುವುದರಿಂದ ಸಾರ್ವಜನಿಕರಿಗೆ ಓಡಾಡಲು ತುಂಬಾ ತೊಂದರೆಯಾಗುತ್ತಿರುವುದರಿಂದ ಆದಷ್ಟು ಬೇಗ ಸಮಸ್ಯೆಯನ್ನು ಬಗೆಹರಿಸಲು ತಿಳಿಸಿದರು.

ಕನ್ನಿಂಗ್ ಹ್ಯಾಮ್ ಕ್ರೆಸಂಟ್ ರೋಡ್, ರಿಫೇರಿಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆ ಬಗ್ಗೆ ಸೋಮವಾರ ತಿಳಿಸುವುದಾಗಿ ಸಹಾಯಕ ಅಭಿಯಂತರರು ತಿಳಸಿದರು.

ಕುಮಾರ ಪಾರ್ಕ್ ವೆಸ್ಟ್ ರೆಸಿಡೆಂಟ್ ಅಸೋಸಿಯೇಷನ್ (Kumara Park West Residents Welfare Association) (R) ರವರು ದಿನಾಂಕ: 18–06–2021ರಂದು ಮಾನ್ಯ ಶಾಸಕರಿಗೆ ಸಲ್ಲಿಸಿರುವ ಮನವಿಯನ್ನು ಸಮಿತಿ ಸಭೆಗೆ ಸಲ್ಲಿಸಿದ್ದು, ಅದರಲ್ಲಿ ಕುಮಾರ ಪಾರ್ಕ್‌ನ (ವೆಸ್ಟ್) ಆನೆ ಪಾರ್ಕ್ ಅಭಿವೃದ್ಧಿ, ಸರ್‌ಪೈಂಟೈನ್ ರಸ್ತೆಯ ಬಿಬಿಎಂಪಿ ಕಟ್ಟಡ ಅಭಿವೃದ್ಧಿ, ಕುಮಾರ ಪಾರ್ಕ್ (ವೆಸ್ಟ್)ನ ರಸ್ತೆಗಳಲ್ಲಿ ಡಾಂಬರೀಕರಣ ಮಾಡುವುದು. ಸರ್‌ಪೈಂಟೈನ್ ರಸ್ತೆಯ ಮಕ್ಕಳ ಉದ್ಯಾನವನ ಅಭಿವೃದ್ಧಿಪಡಿಸುವ ಕಾಮಗಾರಿಗಳನ್ನು ಮಾನ್ಯ ಶಾಸಕರ ಅನುದಾನದಲ್ಲಿ ನಿರ್ವಹಿಸಲು ಕೋರಿರುತ್ತಾರೆ.

ಶ್ರೀ. ಅಜಯ್ ಟಂಡನ್ ಸಮಿತಿ ಸದಸ್ಯರು ಹೊಸದಾಗಿ ಘನತ್ಯಾಜ್ಯ ನಿರ್ವಹಣೆ ಬಗ್ಗೆ ವಿವರ ಬಯಸಿದರು. ಶ್ರೀ ಮಹಮದ್ ಜಾವೇದ್., ಸಹಾಯಕ ಕಾರ್ಯಪಾಲಕ ಅಭಿಯಂತರರು ವಿವರ ನೀಡಿದರು.

ಶ್ರೀ. ರಾಜ್ ದುಗ್ಗಾರ್., ಸಮಿತಿ ಸದಸ್ಯರು ಇಲ್ಲಿಯವರಗೂ ಕೋವಿಡ್–19 ಕಾರ್ಯದಲ್ಲಿ ತೊಡಗಿದ್ದು ಯಾವುದೇ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸಾಧ್ಯವಾಗಿರುವುದಿಲ್ಲ ಹಾಗೂ ಕೂಲಿ ಕಾರ್ಮಿಕರ ತೊಂದರೆ ಯಿಂದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ ಆದರೆ, ಈಗ ಕೋವಿಡ್–19 ಪ್ರಮಾಣ ಕಡಿಮೆಯಾಗಿದ್ದು, ಜನಜೀವನ ಸಹಜ ಸ್ಥಿತಿಗೆ ಮರಳಿರುವುದರಿಂದ ಮುಂದಿನ ಸಭೆಯೊಳಗೆ ಈಗಾಗಲೇ ನೀಡಿರುವ 40 ದೂರುಗಳನ್ನು ತುರ್ತಾಗಿ ಇತ್ಯರ್ಥಗೊಳಿಸಲು ತಿಳಿಸಿದರು. ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೊದಲು (ಮುನ್ನ) ಹಳೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಭೆಗೆ ಕೋರಿದರು.

ನೋಡಲ್ ಅಧಿಕಾರಿಗಳು ಬಾಕಿ ಇರುವ ಕಾಮಗಾರಿಗಳನ್ನು ಇತ್ಯರ್ಥಪಡಿಸುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ತಿಳಿಸುತ್ತಾ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಿದರು.

| | |
|---|---|
| R. Manjunatha | D. N. Rajan |
| ನೋಡಲ್ ಅಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |
| ವಾರ್ಡ್– 93, ವಸಂತನಗರ | ವಾರ್ಡ್– 93, ವಸಂತನಗರ |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. |

ಪ್ರತಿಯನ್ನು:–

1. ಮಾನ್ಯ ಆಡಳಿತಗಾರರು ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು(ಪೂರ್ವ ವಲಯ) ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಜಂಟಿ ಆಯುಕ್ತರು (ಪೂರ್ವ ವಲಯ) ಅವಗಾಹನೆಗೆ ಸಲ್ಲಿಸಿದೆ.
5. ಕಛೇರಿ ಕಡತಕ್ಕೆ.